<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃರವರ ನ್ಯಾಯಾಲಯದಲ್ಲಿ,</u>
<u>ನ.ರಾ.ಪುರ, ಸಂಚಾರಿ ನ್ಯಾಯಾಲಯ ಕೊಪ್ಪ.</u>

ಅಸಲು ದಾವಾ ನಂಃ 10/2021

ಸಿ.ಡಬ್ಲ್ಯು.:-1

ಸಾಕ್ಷಿದಾರರ ಹೆಸರು ಃ ಶರತ್ ನಾಯಕ್ ಹೆಚ್.ಡಿ.

ತಂದೆಯ ಹೆಸರು ಃ ಃ ದೇವರಾಜ್ ಹೆಚ್.ಕೆ.

ವಯಸ್ಸು ಃ 32 ವರ್ಷ

ಉದ್ಯೋಗ ಃ ಭೂ ಮಾಪಕರು.

ವಾಸಸ್ಥಳ ಃ ನ.ರಾ. ಪುರ.

ದಿನಾಂಕಃ 25-06-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

<u>ಮುಖ್ಯವಿಚಾರಣೆಃ ನ್ಯಾಯಾಲಯದ ಪರವಾಗಿಃ</u>

ನಾನು 2024 ರಿಂದ ಇಲ್ಲಿಯವರೆಗೆ ಭೂ ದಾಖಲೆಗಳ ಸಹಾಯ ನಿರ್ದೇಶಕರ ಕಚೇರಿ, ಕೊಪ್ಪ ಇಲ್ಲಿ ಭೂ ಮಾಪಕರು ಎಂದು ಕೆಲಸ ನಿರ್ವಹಿಸುತ್ತಾ ಇರುತ್ತೇನೆ.

ನಾನು ನ್ಯಾಯಾಲಯದ ಆದೇಶದ ಮೇರೆಗೆ ಸರ್ವೆ ನಂಬರ್ 137, 223, 157 ಹಾಗೂ 222 ಬಿಲಗದ್ದೆ ಗ್ರಾಮಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ನಿಯೋಗಿಯಾಗಿ ನನ್ನನ್ನು ನೇಮಕ ಮಾಡಿದ ಮೇರೆಗೆ ನಾನು ಸದರಿ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಉಭಯ ಪಕ್ಷಗಾರರಿಗೆ ಅಂಚೆಯ ಮೂಲಕ ನೋಟೀಸ್ ಜಾರಿ ಮಾಡಿದ್ದು ದಿಃ 09.02.2026 ರಂದು ಬೆಳಿಗ್ಗೆ 11 ಗಂಟೆಗೆ ಸದರಿ ಈ ದಾವೆಯ ಸ್ಥಳಕ್ಕೆ ಬೇಟಿ ನೀಡಿ ವಾದಿ ಮತ್ತು ಪ್ರತಿವಾದಿಯರ ಸಮಕ್ಷಮ ನಾನು ಕಮಿಷನರ್ ಕಾರ್ಯವನ್ನು ಕೈಗೊಂಡು ಸದರಿ ಸ್ಥಳಕ್ಕೆ ಸಂಬಂಧಪಟ್ಟಂತೆ ನಕ್ಷೆಯನ್ನು ತಯಾರಿಸಿರುತ್ತೇನೆ ಹಾಗೂ ಸದರಿ ಸ್ಥಳದಲ್ಲಿ ಸರ್ಕಾರಕ್ಕೆ ಹೇಳಿಕೆ ಕ್ರಮವನ್ನು ಜರುಗಿಸಿ ವಾದಿ ಮತ್ತು ಪ್ರತಿವಾದಿ ಪರ ವಕೀಲರು ನೀಡಿದ ಸೂಚನಾವಳಿಗಳಿಗೆ ಉತ್ತರವನ್ನು ಲಿಖಿತವಾಗಿ ನೀಡಿರುತ್ತೇನೆ. ನಾನು ನ್ಯಾಯಾಲಯದ ಆದೇಶದಂತೆ ನಿಯೋಗಿ ಕಾರ್ಯವನ್ನು ಮಾಡಿ ನನ್ನ ವರದಿ, ನೋಟೀಸ್, ನಕ್ಷೆ, ಸಿ.ಡಿ, ಗೂಗಲ್ ನಕ್ಷೆ, ವಾರೆಂಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

2. ಸಾಕ್ಷಿ ತಾವು ನ್ಯಾಯಾಲಯದಿಂದ ಸ್ವೀಕರಿಸಿದ ವಾರೆಂಟ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು ಗುರುತಿಸಲಾಯಿತು. ದಿಃ 09.02.2026 ರಂದು ಸರ್ವೆ ಕಾಲಕ್ಕೆ ಹಾಜರಿರುವ ಬಗ್ಗೆ ನೀಡಿದ ನೋಟೀಸ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಸಿ-2, ಆರು ಅಂಚೆ ರಶೀದಿ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ ಸಿ-3 ರಿಂದ 8, ಅಳತೆ ಬಾಬ್ತು ತಯಾರಿಸಿದ ನಕ್ಷೆ ಹಾಜರು ಪಡಿಸಿದ್ದು ಅದನ್ನು ನಿಸಿ-9, ಸರ್ಕಾರಕ್ಕೆ ಸಲ್ಲಿಸಿದ ಹೇಳಿಕೆ ಪ್ರತಿ ಹಾಜರು ಪಡಿಸಿದ್ದು ಅದನ್ನು ನಿಸಿ-10, ಗೂಗಲ್ ಮ್ಯಾಪ್ ಹಾಜರು ಪಡಿಸಿದ್ದು ಅದನ್ನು ನಿಸಿ-11,

ಒಂದು ಸಿ.ಡಿ. ಹಾಜರು ಪಡಿಸಿದ್ದು ಅದನ್ನು ನಿಸಿ-12, ವಾದಿ ಪರ ವಕೀಲರು ಹೇಳಿದ ಸೂಚನಾವಳಿಗೆ ನೀಡಿದ ಉತ್ತರ ಪ್ರತಿ ಹಾಜರು ಪಡಿಸಿದ್ದು ಅದನ್ನು ನಿಸಿ-13, ಪ್ರತಿವಾದಿ ಪರ ವಕೀಲರು ನೀಡಿದ ಸೂಚನಾವಳಿಗೆ ನೀಡಿದ ಉತ್ತರ ಪ್ರತಿ ಹಾಜರು ಪಡಿಸಿದ್ದು ಅದನ್ನು ನಿಸಿ-14 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಮತ್ತು ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ನೀಡಲಾಯಿತುಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,

ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ